# ಎಲ್‌ನಿನೋ ಪ್ರಭಾವದಿಂದ ಇಂಡೋನೇಶಿಯಾದ ಪಾಮೆಣ್ಣೆ ಉತ್ಪಾದನೆ 2016 ರಲ್ಲಿ 25–30% ಇಳಿಕೆ ಸಾಧ್ಯತೆ.

ಈಗಿನ ಎಲ್‌ನೀನೋ ಹವಾಮಾನದ ಪ್ರಭಾವದಿಂದ ಜಾಗತಿಕ ಅತೀ ಹೆಚ್ಚು ಪಾಮೆಣ್ಣೆ ಉತ್ಪಾದಿಸುವ ದೇಶ, ಇಂಡೋನೇಶಿಯಾದ 2016ರ ಪಾಮೆಣ್ಣೆ ಉತ್ಪಾದನೆ 25–30 ಶೇಕಡಾ ಕಡಿಮೆಯಾಗುವ ಸಂಭವವಿದೆಯೆಂದು ಗೋಲ್ಡನ್ ಎಗ್ರಿ ಬಿಸ್ನೆಸ್‌ನ ಅಧ್ಯಕ್ಷ ಮತುಸಿಇಓ ಆಗಿರುವ ಫ್ರಾಂಕೀ ವಿಡ್‌ಜಾಜಾ ಅವರು ಇಂಡೋನೇಶಿಯಾದ ಚೇಂಬರ್ ಆಫ್ ಕಾಮರ್ಸ್ ಎಂಡ್ ಇಂಡಸ್ಟ್ರಿಯ ಇಂಟವ್ಯೂನಲ್ಲಿ ಹೇಳಿದ್ದಾರೆನ್ನಲಾಗಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈಗ ಎಲ್‌ನೀನೋ ಒಣ ಹವೆ ಪ್ರಭಲವಾಗಿದ್ದು, ಕೆಲವು ವಿಷ್ಲೇಶಕರ ಅಭಿಪ್ರಾಯದಂತೆ ಫೆಬ್ರವರಿಯ ತವಕ ಮುಂದುವರಿದರೆ ಇಂಡೋನೇಶಿಯಾದ ಪಾಮೆಣ್ಣೆ ಉತ್ಪಾದನೆ 30 ಶೇಕಡಾ ತನಕ ಇಳಿಕೆಯಾಗಬಹುದೆಂದು ಅವರು ಹೇಳಿದ್ದಾರೆ.

ಪಾಮೆಣ್ಣೆ ಮಾರುಕಟ್ಟೆ ಈಗಾಗಲೇ ಎಲ್‌ನೀನೋ ಪ್ರಭಾವದ ವರದಿಗಳಿಗೆ ಸ್ಪಂದಿಸುತ್ತಿದ್ದು, ಮಲೇಶಿಯನ್ ಬಿ.ಎಂ.ಡಿ. ಅಗಸ್ಟ್ 26 ಕ್ಕೆ 1867ರ ಕೆಳ ಅಂಕಗಳಲ್ಲಿದ್ದು ಈ 2480 ರಿಂಗಿಟ್ಸ್‌ಗಳಿಗೆ ಏರಿಕೆಯಾಗಿದೆ.